

# ಲಾಳಾಕಾರದ ಏಡಿಗಳ ಕುರಿತು ಪರಾನುಭೂತಿ

ಚಾರ್ಲ್ಸ್ ಐಸೆನ್‌ಸ್ಟೈನ್

**ಪರಿಸರದ ಪ್ರಸಕ್ತ ಬಿಕ್ಕಟ್ಟಿಗೆ ಕಾರಣಗಳು ಒಂದೋ, ಹಲವೋ? ನಾವು ಸಾಮಾನ್ಯವಾಗಿ ಅನುಸರಿಸುವ ಸಮಸ್ಯಾ-ಪರಿಹಾರ ವಿಧಾನಗಳು ಈ ಸವಾಲನ್ನು ಹೇಗೆ ಸ್ವೀಕರಿಸುತ್ತವೆ? ಈ ಸಮಸ್ಯೆಯನ್ನು ಬಗೆಹರಿಸುವಲ್ಲಿ ಪರಾನುಭೂತಿ ಹಾಗೂ ಸ್ಥಳೀಯ ಪ್ರದೇಶಗಳ ಕುರಿತಾದ ಕಾಳಜಿ, ಇವುಗಳ ಪಾತ್ರವೇನು?**

*“ನಾವು ಮಕ್ಕಳಾಗಿದ್ದಾಗ ಆ ನದೀಮುಖಜ ಭೂಮಿಯಲ್ಲಿ ಕಡಲಜೊಂಡುಗಳು ಹಾಗೂ ಹಾವುಮೀನುಗಳು ತುಂಬಿರುತ್ತಿದ್ದವು” ಎಂದರು ಸ್ಟೆಲ್ಲಾ. “ಅದು ಎಲ್ಲ ರೀತಿಯ ವನ್ಯಜೀವಿಗಳಿಂದ ತುಂಬಿ ತುಳುಕಾಡುತ್ತಿತ್ತು. ಏಡಿಗಳು, ಮೃದ್ವಂಗಿಗಳು, ಲಾಳಾಕಾರದ ಏಡಿಗಳು-ಅಲ್ಲೇ ಮೃದ್ವಂಗಿಗಳ ಆವಾಸಸ್ಥಾನ ಒಂದಿತ್ತು-ಒಂದು ಸಲ ನಾನು ಆ ನೀರಿನಲ್ಲಿ ಈಜಾಡುತ್ತಿದ್ದಾಗ ಒಂದು ಹಾವುಮೀನನ್ನು ನನ್ನ ಕಣ್ಣೆದುರಿಗೆ ಕಂಡೆ.”*

ಸ್ಟೆಲ್ಲಾ ಹೇಳುತ್ತಿದ್ದ ಆ ಜಾಗ ಯಾವುದೆಂದರೆ, ಅಮೆರಿಕಾದ ರೋಡ್ ಐಲ್ಯಾಂಡ್‌ನಲ್ಲಿ, ನ್ಯಾರೊ ನದಿಯು ನಾರಗಾನ್ಸೆಟ್ ಕೊಲ್ಲಿಯನ್ನು ಸಂಧಿಸುವ ತಾಣ. ಚಿಕ್ಕಂದಿನಿಂದಲೂ ಅವರು ಪದೇಪದೇ ಭೇಟಿ ಮಾಡುತ್ತಿದ್ದ ತಾಣ ಅದಾಗಿತ್ತು. ಅದೊಂದು ಸುಂದರವಾದ ಪ್ರದೇಶ ಹಾಗೂ ನನ್ನ ಮಡದಿ ಹೇಳಿರದಿದ್ದರೆ ಅದು ಅಷ್ಟೊಂದು ಜೀವಿಗಳನ್ನು ಕಳೆದುಕೊಂಡಂತಹ ತಾಣವಾಗಿತ್ತು ಎಂದು ನನಗೆ ಗೊತ್ತೇ ಆಗಿರುತ್ತಿರಲಿಲ್ಲ.

ಆ ಹಾವುಮೀನುಗಳು ಏಕೆ ಕಣ್ಮರೆಯಾದವೆಂಬುದಕ್ಕೆ ಕಾರಣ ನಮ್ಮಿಬ್ಬರಲ್ಲಿ ಯಾರಿಗೂ ಗೊತ್ತಿಲ್ಲ. ನಾವಿಬ್ಬರೂ ಆ ದುಃಖದ ಘಳಿಗೆಯನ್ನು ಅನುಭವಿಸಿದೆವು, ಆಗ ಸ್ಟೆಲ್ಲಾ ಮತ್ತೊಂದು ನೆನಪನ್ನು ತಂದುಕೊಂಡರು, ಅದರಿಂದಾಗಿ ಈ ಹಾವುಮೀನುಗಳು ಏಕೆ ಕಣ್ಮರೆಯಾಗಿವೆ ಎಂಬುದಕ್ಕೆ ಒಂದು ರೀತಿಯ ವಿವರಣೆ ಸಿಕ್ಕಹಾಗೆ ಆಯಿತು. ಅವಳು ಹಾಗೂ ಅವಳ ಸ್ನೇಹಿತೆ ಬೆವರ್ಲಿ ಕೆಲವು ಸಲ ಬೆಳಿಗ್ಗೆಯೇ, ಅವರು ಯಾವುದನ್ನು ‘ರಕ್ಷಣಾ ಕಾರ್ಯಾಚರಣೆ’ ಎಂದು ಕರೆಯುತ್ತಿದ್ದರೋ ಆ ಕಾರ್ಯದ ನಿಮಿತ್ತ, ಅದೇ ಕಡಲ ತೀರಕ್ಕೆ ಭೇಟಿ ನೀಡುತ್ತಿದ್ದರು. ರಾತ್ರಿ ಹೊತ್ತಿನಲ್ಲಿ ಯಾರೋ ಬಂದು, ಮರಳಿನ ಮೇಲೆ ತೆವಳಿಕೊಂಡು ಬಂದಿರುತ್ತಿದ್ದ ಎಲ್ಲಾ ಲಾಳಾಕಾರದ ಏಡಿಗಳನ್ನು ತಿರುವಿ ಹಾಕಿರುತ್ತಿದ್ದರು, ಅವು ಅಸಹಾಯಕವಾಗಿ ಅಲ್ಲೇ ಸತ್ತು ಬಿದ್ದಿರುತ್ತಿದ್ದವು. ಸ್ಟೆಲ್ಲಾ ಮತ್ತು ಬೆವರ್ಲಿ ಅವುಗಳನ್ನು ಮತ್ತೆ ತಲೆ ಮೇಲೆ ಮಾಡಿ ತಿರುವಿ ಹಾಕುತ್ತಿದ್ದರು. “ಇದನ್ನು ಯಾರೇ ಮಾಡುತ್ತಿರಲಿ, ಅವರಿಗೆ ಹಾಗೆ ಮಾಡಲು ಯಾವುದೇ ಕಾರಣವೂ ಇರಲಿಲ್ಲ” ಎಂದು ಅವಳು ಹೇಳುತ್ತಿದ್ದಳು. “ಅದೊಂದು ಅರ್ಥಹೀನವಾದ ಕೊಲೆಯಾಗಿತ್ತು.”

ಇಂತಹ ಕಥೆಗಳನ್ನು ಕೇಳಿದಾಗ ನನಗೆ, ನಾನು ಅಡ್ಡದಾರಿ ಹಿಡಿದು ಯಾವುದೋ ತಪ್ಪಾದ ಗ್ರಹಕ್ಕೆ ಬಂದಿರುವೆನೇನೋ ಎಂಬ ಭಾವನೆ ಬರುತ್ತದೆ.

ನಮ್ಮ ಈ ಸಲದ ಭೇಟಿಯಲ್ಲಿ ನಾವು ಯಾವುದೇ ಲಾಳಾಕಾರದ ಏಡಿಗಳನ್ನು ನೋಡಲಿಲ್ಲ. ಈಗ ಅವು ಒಂದು ಅಪರೂಪದ ದೃಶ್ಯವಾಗಿವೆ. ಜನರು ಅವುಗಳಲ್ಲಿ ಬಹಳಷ್ಟನ್ನು ಕೊಂದುಹಾಕಿದ್ದರಿಂದಾಗಲೀ ಅಥವಾ ನಮ್ಮ ಪರಿಸರ ವ್ಯವಸ್ಥೆಯ ಸಾಮಾನ್ಯವಾದ ಕೆಡುವಿಕೆಯಿಂದಾಗಲೀ ಅವು ಕಾಣೆಯಾಗುತ್ತಿವೆಯೇ



**ಚಿತ್ರ 1. ಲಾಳಾಕಾರದ ಏಡಿ ನೋಡಲು ಹೇಗಿರುತ್ತದೆ?**
ಕೃಪೆ: ಜೇಮ್ಸ್ ಸೈಂಟ್ ಜಾನ್ URL: https://www.flickr.com/photos/jsjgeology/24605087516.
ಪರವಾನಗಿ: CC-BY 2.0

ಎಂದು ನನಗೆ ಗೊತ್ತಿಲ್ಲ. ಅಥವಾ ಕೀಟನಾಶಕಗಳ ಹರಿವಿನಿಂದಾಗಿ, ಕೃಷಿ ಸಂಬಂಧಿತ ವಸ್ತುಗಳ ಹರಿವಿನಿಂದಾಗಿ, ಭೂಮಿಯನ್ನು ಅಭಿವೃದ್ಧಿ ಪಡಿಸುತ್ತಿರುವುದರಿಂದಾಗಿ, ಔಷಧೀಯ ತ್ಯಾಜ್ಯಗಳ ಹರಿವಿನಿಂದಾಗಿ ಅಥವಾ ಅಭಿವೃದ್ಧಿಯಿಂದಾಗಿ ಬದಲಾಗುತ್ತಿರುವ ಮಳೆ ಸುರಿವ ವಿಧಾನಗಳಿಂದಾಗಿ ಅಥವಾ ವಾತಾವರಣದ ಬದಲಾವಣೆಯಿಂದಾಗಿ ಹೀಗಾಗುತ್ತಿರಬಹುದು... ಪ್ರಾಯಶಃ ಈ ಲಾಳಾಕಾರದ ಏಡಿಗಳು ಇವುಗಳಲ್ಲಿ ಯಾವುದಕ್ಕಾದರೂ ಸೂಕ್ಷ್ಮವಾಗಿರಬಹುದು ಅಥವಾ ಅವು ತಿನ್ನುವಂತಹ ಜೀವಿಗಳು ಇವುಗಳಿಗೆ ಸೂಕ್ಷ್ಮವಾಗಿರಬಹುದು. ಕಡಲ ಜೊಂಡುಗಳಲ್ಲಿ ಜೀವಿಸುವ ಮೃದ್ವಂಗಿಗಳ ಮೇಲೆ ಸಂತಾನೋತ್ಪಾದನೆ ಮಾಡಿಕೊಳ್ಳುವ ಸೂಕ್ಷ್ಮಾಣುಜೀವಿಗಳು ಅವುಗಳಿಗೆ ಸೂಕ್ಷ್ಮವಾಗಿರಬಹುದು, ಅವು ಲಾಳಾಕಾರದ ಏಡಿಗಳಿಗೆ ಆಹಾರ ಒದಗಿಸುವ ಆಹಾರ ಸರಪಳಿಯಲ್ಲಿ ಯಾವುದೋ ಒಂದು ಮುಖ್ಯವಾದಂತಹ ಪಾತ್ರವನ್ನು ನಿರ್ವಹಿಸುತ್ತವೆ.

ಲಾಳಾಕರದ ಏಡಿಗಳು ಹಾಗೂ ಹಾವುಮೀನುಗಳ ಸಾವಿಗೆ ವೈಜ್ಞಾನಿಕ ವಿವರಣೆ ಏನೇ ಇರಲಿ, ಅದರ ನಿಜವಾದ ಕಾರಣ ಸ್ಟೆಲ್ಲಾ ವಿವರಿಸಿದಂತೆ ಅರ್ಥಹೀನವಾದ ಕೊಲೆಯೇ ಆಗಿದೆ ಎಂಬುದರ ಬಗ್ಗೆ ನನಗೆ ನಿಜವಾಗಿಯೂ ಖಾತ್ರಿಯಾಗಿದೆ. ನಾನು ಹೇಳಲು ಹೊರಟಿರುವುದು ಅವುಗಳ ಕೊಲೆಯ ಬಗ್ಗೆಯಲ್ಲ, ಆದರೆ ಅದರ ಹಿಂದಿರುವ ಅರ್ಥಹೀನತೆ ಇದೆಯಲ್ಲ – ಯಾವುದರಿಂದಾಗಿ ನಮ್ಮ ಇಂದ್ರಿಯಾನುಭೂತಿಗೆ ಲಕ್ವ ಹೊಡೆದಿದೆಯೋ ಹಾಗೂ ನಮ್ಮ ಪರಾನುಭೂತಿಯು ಕುಗ್ಗಿಹೋಗಿದೆಯೋ ಅದರ ಬಗ್ಗೆ.

## ಕಾರಣದತ್ತ ಧಾವಿಸುವುದು

ಏಡಿಗಳು, ಕಡಲಜೊಂಡುಗಳು, ಹಾವುಮೀನುಗಳು ಎಲ್ಲವೂ ಕಣ್ಮರೆಯಾಗಿವೆ. ಮನಸ್ಸು ಅದರ ಹಿಂದಿನ ಕಾರಣಕ್ಕಾಗಿ ಹುಡುಕಾಡುತ್ತದೆ–ಅದನ್ನು ಅರ್ಥ ಮಾಡಿಕೊಳ್ಳುವುದಕ್ಕೆ, ಅದರ ಮೇಲೆ ಆರೋಪ ಹೊರಿಸುವುದಕ್ಕೆ ಹಾಗೂ ಇದೇ ಕಾರಣ ಎಂದು ಗಟ್ಟಿ ಮಾಡಿಕೊಳ್ಳುವುದಕ್ಕೆ–ಆದರೆ ಒಂದು ಸಂಕೀರ್ಣವಾದ, ಸರಳರೇಖಾತ್ಮಕವಲ್ಲದ ವ್ಯವಸ್ಥೆಯಲ್ಲಿ, ಅನೇಕ ಸಲ ಕಾರಣಗಳನ್ನು ಪ್ರತ್ಯೇಕಿಸುವುದು ಅಸಾಧ್ಯವಾಗುತ್ತದೆ.

ಒಂದು ಸಂಕೀರ್ಣ ವ್ಯವಸ್ಥೆಯಲ್ಲಿ ಇರುವಂತಹ ಈ ಗುಣವು, ನಮ್ಮ ಸಂಸ್ಕೃತಿಯಲ್ಲಿ ಅಡಕವಾಗಿರುವ ಸಮಸ್ಯಾ-ಪರಿಹಾರದ ಸಾಮಾನ್ಯ ಧೋರಣೆಯೊಂದಿಗೆ ತಿಕ್ಕಾಟಕ್ಕೆ ಒಳಗಾಗುತ್ತದೆ. ಅದು ಮೊಟ್ಟಮೊದಲು ಮಾಡುವ ಕೆಲಸವೆಂದರೆ ಸಮಸ್ಯೆಯ ಹಿಂದಿನ ಕಾರಣವನ್ನು, ಅಪರಾಧಿಯನ್ನು, ಸೂಕ್ಷ್ಮಾಣು ಜೀವಿಯನ್ನು, ಕೀಟವನ್ನು, ಕೆಟ್ಟ ವ್ಯಕ್ತಿಯನ್ನು, ಕಾಯಿಲೆಯನ್ನು, ತಪ್ಪು ವಿಚಾರವನ್ನು ಅಥವಾ ಕೆಟ್ಟ ವೈಯಕ್ತಿಕ ಗುಣವನ್ನು ಗುರುತಿಸುವುದು. ಎರಡನೆಯದೆಂದರೆ, ಅಪರಾಧಿಯ ಮೇಲೆ ಪ್ರಾಬಲ್ಯ ಸಾಧಿಸುವುದು, ಅದನ್ನು ಸೋಲಿಸುವುದು ಅಥವಾ ನಾಶ ಪಡಿಸುವುದು. ಸಮಸ್ಯೆ: ಅಪರಾಧ; ಪರಿಹಾರ: ಅಪರಾಧಿಯನ್ನು ಜೈಲಿಗೆ ಹಾಕುವುದು. ಸಮಸ್ಯೆ: ಭಯೋತ್ಪಾದಕ ಚಟುವಟಿಕೆಗಳು; ಪರಿಹಾರ: ಭಯೋತ್ಪಾದಕರನ್ನು ಕೊಲ್ಲುವುದು. ಸಮಸ್ಯೆ: ವಲಸೆ; ಪರಿಹಾರ ವಲಸಿಗರನ್ನು ಹೊರಗಟ್ಟುವುದು. ಸಮಸ್ಯೆ: ಲೈಮ್ ರೋಗ: ಪರಿಹಾರ: ರೋಗಾಣುವನ್ನು ಗುರುತಿಸಿ, ಅದನ್ನು ಕೊಲ್ಲುವುದಕ್ಕೆ ಒಂದು ಮಾರ್ಗವನ್ನು ಕಂಡುಹಿಡಿಯುವುದು. ಸಮಸ್ಯೆ: ಅಜ್ಞಾನ; ಪರಿಹಾರ: ಶಿಕ್ಷಣ. ಸಮಸ್ಯೆ: ಹವಾಮಾನ ಬದಲಾವಣೆ; ಪರಿಹಾರ: ಕಾರ್ಬನ್ ಹೊರಸೂಸುವಿಕೆಯನ್ನು ಕಡಿಮೆ ಮಾಡುವುದು. ಸಮಸ್ಯೆ: ಬೊಜ್ಜು; ಪರಿಹಾರ: ತಿನ್ನುವುದನ್ನು ಕಡಿಮೆ ಮಾಡುವುದು.



**ಚಿತ್ರ 2. ಹಾವುಮೀನು ನೋಡಲು ಹೇಗಿರುತ್ತದೆ ?**
ಕೃಪೆ: ಜೇಮ್ಸ್ ಸೈಂಟ್ ಜಾನ್: URL: https://www.flickr.com/photos/jsjgeology/52520155186/in/photostream/.
ಪರವಾನಗಿ: CC-BY 2.0

ಇಡೀ ರಾಜಕೀಯ ಕ್ಷೇತ್ರದಲ್ಲಿ ಹೇಗೆ ಸರಳೀಕರಣವಾದಿ ಆಲೋಚನೆಯು ವ್ಯಾಪಿಸಿಕೊಂಡಿದೆ ಎನ್ನುವುದನ್ನು ಮೇಲಿನ ಉದಾರಹರಣೆಗಳಿಂದ ನೀವು ನೋಡಬಹುದು. ಹತ್ತಿರದ ಒಂದು ಕಾರಣ ಕಂಡು ಬರದಿದ್ದಾಗ ನಾವು ಚಡಪಡಿಸುವಂತಾಗುತ್ತದೆ, ಆತುರದಿಂದ ಯಾವುದಾದರೂ ಅನುಕೂಲವಾದ 'ನಿರ್ದಿಷ್ಟ ಕಾರಣ'ವನ್ನು ಕಂಡುಹಿಡಿಯಲು ಆತುರಪಡುತ್ತೇವೆ ಹಾಗೂ ಅದರ ವಿರುದ್ಧ ಸಮರ ಸಾರಲು ಹೊರಡುತ್ತೇವೆ. ಪ್ರಾಯಶಃ ನಮ್ಮ ಮೇಲೆ ಎಲ್ಲೆಡೆಗಳಿಂದ ಬರುತ್ತಿರುವ ಬಹುಮುಖಿ ಬಿಕ್ಕಟ್ಟುಗಳನ್ನು ಎದುರಿಸುವಲ್ಲಿ ನಾವು ಕಾಣುತ್ತಿರುವ ಸಮಸ್ಯೆ ಎಂದರೆ, ನಮ್ಮ ಮೂಲ ಸಮಸ್ಯೆ ಬಗೆಹರಿಸುವ ಕಾರ್ಯತಂತ್ರವು ಕುಸಿದು ಬಿದ್ದಿದೆ. ಇದು, ನಾನು 'ಪ್ರತ್ಯೇಕೀಕರಣದ ಕಥೆ' ಎಂದು ಏನನ್ನು ಕರೆಯುತ್ತೇನೋ ಅಂತಹ ಆಳವಾದ ಸಂಕಥನದ ಮೇಲೆ ನಿಂತಿದೆ. ಅದರ ಒಂದು ಎಳೆ ಎಂದರೆ ಪ್ರಕೃತಿಯು ನಮ್ಮಿಂದ ಹೊರಗಿರುವಂಥದ್ದು, ನಮ್ಮ ನಿಯಂತ್ರಣಕ್ಕೆ ಒಳಪಡುವಂಥದ್ದು ಹಾಗೂ ಮಾನವನ ಪ್ರಗತಿ ಎಂದರೆ, ಈ ನಿಯಂತ್ರಣವನ್ನು ಕೊನೆಯೇ ಇಲ್ಲದೆ ವಿಸ್ತರಿಸುವುದು ಎನ್ನುವಂಥದ್ದು.

ನದೀಮುಖಜ ಭೂಮಿಗಳು ಈ ರೀತಿ ಸಾವನ್ನಪ್ಪುತ್ತಿರುವುದನ್ನು ತಿಳಿದುಕೊಂಡ ಮೇಲೆ ಅದಕ್ಕೆ ಕಾರಣವಾದ ಅಪರಾಧಿ ಯಾರು ಎಂದು ತಿಳಿದುಕೊಳ್ಳಬೇಕೆಂದು, ಯಾರನ್ನಾದರೂ ದ್ವೇಷಿಸುವುದಕ್ಕೆ ಹುಡುಕಿಕೊಳ್ಳಬೇಕೆಂದು ಹಾಗೂ ಯಾರ ಮೇಲಾದರೂ ಆರೋಪವನ್ನು ಹೊರಿಸಬೇಕೆಂಬ ಉದ್ವೇಗ ನನ್ನಲ್ಲಿ ಉಂಟಾಯಿತು. ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಅಷ್ಟು ಸುಲಭವಾಗಿದ್ದರೇ ಎಂದು ನಾನು ಆಶಿಸುವಂತಾಯ್ತು! ಈ ಸಮಸ್ಯೆಗೆ ಇದೇ ನಿರ್ದಿಷ್ಟ ಕಾರಣ ಎಂದು ನಾವು ಗುರುತಿಸಲು ಸಾಧ್ಯವಾಗಿದ್ದರೆ ಪರಿಹಾರ ಕಂಡುಕೊಳ್ಳುವುದು ಎಷ್ಟೊಂದು ಸುಲಭ ಸಾಧ್ಯವಾಗುತ್ತಿತ್ತು. ಆದರೆ ಯಾವುದು ಹಿತಕರವಾಗಿರುತ್ತದೆಯೋ ಅದು ಯಾವಾಗಲೂ ಸತ್ಯವಾಗಿರುತ್ತದೆ ಎಂದೇನಲ್ಲ. ನಮ್ಮೆಲ್ಲರನ್ನು, ನಾವು ಹೇಗೆ ಜೀವಿಸುತ್ತಿದ್ದೇವೆಯೋ ಅದಕ್ಕಾಗಿ ಆರೋಪಿಗಳನ್ನಾಗಿ ಮಾಡುವಂತಹ ಸಾವಿರಾರು ಅಂತರ್ಸಂಬಂಧಗಳನ್ನು ಹೊಂದಿರುವ ವಿಷಯಗಳು ಅದಕ್ಕೆ ಕಾರಣವಾಗಿದ್ದರೆ ಏನು ಮಾಡುವುದು ? ಅದು, ಎಲ್ಲವನ್ನೂ ಒಳಗೊಳ್ಳುವಂಥದಾಗಿದ್ದು, ಜೀವನ ಎಂದರೆ ನಾವು ಏನೆಂದು ಕರೆಯುತ್ತೇವೆಯೋ ಅದರೊಂದಿಗೆ ಬಿಡಿಸಲಾಗದಂತೆ ಹೆಣೆದುಕೊಂಡಿದ್ದರೆ, ಆಗ ಅದನ್ನು ಅದರ ಅಗಾಧತೆಯೊಂದಿಗೆ ನೋಡಿದಾಗ, ನಾವು ಏನು ಮಾಡಲು ಸಾಧ್ಯ ಎಂದು ಅರ್ಥವಾಗದಿದ್ದರೆ ಆಗ ಏನು ಮಾಡುವುದು ?

ಈಗ ಸಂಭವಿಸುತ್ತಿರುವ ನಷ್ಟದ ವಿಷಣ್ಣತೆಯು ನಮ್ಮನ್ನು ತೋಯಿಸಿದಾಗ ಹಾಗೂ ಇದರಿಂದ ಸುಲಭವಾಗಿ ನಾವು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವಂತಹ, ಏನು ಮಾಡಬೇಕೆಂದು ತೋಚದೇ ಹೋಗುವ, ದುರ್ಬಲವಾದ ಘಳಿಗೆ ಇದೆಯಲ್ಲ, ಅದು ಅತ್ಯಂತ ಶಕ್ತಿಯುತವಾದಂತಹ ಹಾಗೂ ಅವಶ್ಯಕವಾದಂತಹ ಘಳಿಗೆ. ಅದಕ್ಕೆ ನಮ್ಮನ್ನು ಆಳವಾಗಿ ಹೊಕ್ಕು, ನಮ್ಮಲ್ಲಿ ಹೆಪ್ಪುಗಟ್ಟಿರುವಂತಹ ನೋಡುವ ರೀತಿಯನ್ನು ಹಾಗೂ ನಮ್ಮಲ್ಲಿ ಬೇರುಬಿಟ್ಟಿರುವಂತಹ ಪ್ರತಿಕ್ರಿಯಿಸುವ ಮಾದರಿಗಳನ್ನು ತೊಳೆದು ಹಾಕುವಂತಹ ಶಕ್ತಿ ಇದೆ. ಅದು ನಮಗೆ ಹೊಸ ಕಣ್ಣೋಟವನ್ನು ಕೊಡುತ್ತದೆ ಹಾಗೂ ನಮ್ಮನ್ನು ಸಾಧಾರಣ ಜೀವನಕ್ಕೆ ಒಗ್ಗಿಸಿರುವಂತಹ ಭಯದ ಕಬಂಧಬಾಹುಗಳನ್ನು ಸಡಿಲಿಸುತ್ತದೆ. ಸಿದ್ಧ ಪರಿಹಾರವೂ ಮಾದಕ ದ್ರವ್ಯದಂತೆ, ಅದು ಗಾಯವನ್ನು ಗುಣಪಡಿಸದೆ ನೋವಿನಿಂದ ಗಮನವನ್ನು ಬೇರೆಡೆಗೆ ಸೆಳೆಯುತ್ತದೆ.

"ನಾವು ಈ ಸಮಸ್ಯೆಗೆ ಏನಾದರೂ ಮಾಡೋಣ" ಎನ್ನುವ ಆತುರದ ತಪ್ಪಿಸಿಕೊಳ್ಳುವಿಕೆಯಲ್ಲಿ, ಮಾದಕದ್ರವ್ಯದಂತಹ ಪರಿಹಾರವನ್ನು ಕಂಡುಕೊಳ್ಳುವುದನ್ನು ನೀವು ಗಮನಿಸಿರಬಹುದು. ನಿಜ, ಯಾವ ಸಂದರ್ಭಗಳಲ್ಲಿ ಕಾರ್ಯ ಮತ್ತು ಕಾರಣಗಳು ಸರಳವಾಗಿರುತ್ತವೋ ಹಾಗೂ ನಾವು ಏನು ಮಾಡಬೇಕೆನ್ನುವುದು ನಮಗೆ ಸ್ಪಷ್ಟವಾಗಿ ತಿಳಿದಿರುತ್ತದೋ ಆಗ ತಕ್ಷಣದ ಪರಿಹಾರವು ಸರಿಯಾದುದೇ. ನಿಮ್ಮ ಪಾದದಲ್ಲಿ ಸಿಬುರು ಸಿಕ್ಕಿಹಾಕಿಕೊಂಡಿದ್ದರೆ ಸಿಬುರನ್ನು ತೆಗೆದುಹಾಕಬೇಕು. ಆದರೆ ಈ ಭೂಮಿಯ ಮೇಲಿನ ಪರಿಸರದ ಬಿಕ್ಕಟ್ಟುಗಳನ್ನು ಒಳಗೊಂಡಂತೆ ಬಹುತೇಕ ಸಂದರ್ಭಗಳು ಇದಕ್ಕಿಂತ ಹೆಚ್ಚು ಸಂಕೀರ್ಣವಾಗಿರುತ್ತವೆ. ಅಂತಹ ಸಂದರ್ಭಗಳಲ್ಲಿ, ಹೆಚ್ಚು ಅನುಕೂಲಕರವಾದ, ಮೇಲ್ಮೈಮಟ್ಟದಲ್ಲಿ ಸುಲಭವಾಗಿ ಕಾಣಿಸುವಂತಹ ಕಾರಣಗಳತ್ತ ಧಾವಿಸುವ ಅಭ್ಯಾಸವು ಇನ್ನೂ ಹೆಚ್ಚು ಅರ್ಥಪೂರ್ಣವಾದ ಪ್ರತಿಕ್ರಿಯೆಯಿಂದ ನಮ್ಮನ್ನು ಬೇರೆಡೆಗೆ ಸೆಳೆಯುತ್ತದೆ. ಅದರ ಆಳದಲ್ಲಿ, ಮತ್ತೆ ಅದರ ಆಳದಲ್ಲಿ, ಅದರ ಮತ್ತಷ್ಟು ಆಳದಲ್ಲಿ ಏನಿರಬಹುದು ಎನ್ನುವುದನ್ನು ನೋಡುವುದರಿಂದ ನಮ್ಮನ್ನು ಅದು ತಡೆಹಿಡಿಯುತ್ತದೆ.

ಲಾಳಾಕಾರದ ಏಡಿಗಳನ್ನು ತಿರುವಿ ಹಾಕುತ್ತಿರುವ ಆ ಕಲ್ಲೆದೆಯ ಕ್ರೌರ್ಯದ ಆಳದಲ್ಲಿ ಏನಿದೆ ? ಹುಲ್ಲುಹಾಸನ್ನು ಬೆಳೆಸಲಿಕ್ಕಾಗಿ ಅಪಾರ ಪ್ರಮಾಣದ ರಾಸಾಯನಿಕಗಳ ಬಳಕೆಯ ಆಳದಲ್ಲಿ ಏನಿದೆ ? ಉಪನಗರಗಳಲ್ಲಿ ತಲೆಯೆತ್ತಿರುವ ಬೃಹತ್ ಕಟ್ಟಡಗಳ ಆಳದಲ್ಲಿ ಏನಿದೆ? ರಾಸಾಯನಿಕ ಕೃಷಿ ಪದ್ಧತಿಯ ಆಳದಲ್ಲಿ ಏನಿದೆ ? ಕಡಲ ತೀರಗಳಲ್ಲಿ ನಡೆಸುವ ಅತಿಯಾದ ಮೀನುಗಾರಿಕೆಯ ಆಳದಲ್ಲಿ ಏನಿದೆ ? ಇದು ನಮ್ಮನ್ನು ನಮ್ಮ ನಾಗರಿಕತೆಯ ಮೂಲಭೂತ ವ್ಯವಸ್ಥೆಗಳು, ಕಥನಗಳು ಹಾಗೂ ಮನಃಸ್ಥಿತಿಗಳತ್ತ ಕರೆದುಕೊಂಡು ಹೋಗುತ್ತದೆ.

ಆದರೆ, ವ್ಯವಸ್ಥೆಯ ಬೇರುಗಳು ಅರಿಯಲಾಗದಷ್ಟು ಆಳವಾಗಿರುವುದರಿಂದ, ಎಂದೂ ನೇರವಾದ ಕ್ರಮವನ್ನು ತೆಗೆದುಕೊಳ್ಳಲಾಗದು ಎಂದು ನಾನು ಹೇಳುತ್ತಿದ್ದೇನೆಯೇ ? ಇಲ್ಲ. ಅರ್ಥವಾಗದಿರುವಿಕೆ, ಗೊಂದಲ ಹಾಗೂ ದುಃಖ ನಮ್ಮನ್ನು ಎಂತಹ ಪರಿಸ್ಥಿತಿಗೆ ತೆಗೆದುಕೊಂಡು ಹೋಗುತ್ತದೆ ಎಂದರೆ ನಾವು ಒಂದೇ ಏಟಿಗೆ ಹಲವಾರು ಹಂತಗಳಲ್ಲಿ ಕೆಲಸ ಮಾಡಬೇಕಾಗುತ್ತದೆ, ಏಕೆಂದರೆ ಕಾರಣದ ಪ್ರತಿಯೊಂದು ಆಯಾಮವೂ ಸಹ ಇನ್ನೊಂದು ದೊಡ್ಡ ಚಿತ್ರಣದ ಭಾಗವಾಗಿರುವುದನ್ನು ನಾವು ನೋಡುತ್ತೇವೆ. ಹಾಗಾಗಿ ನಾವು ಸುಲಭವಾಗಿರುವ, ಸುಳ್ಳು ಪರಿಹಾರಗಳಿಗೆ ಜಿಗಿಯುವುದಿಲ್ಲ.

## ಎಲ್ಲ ಕಾರಣಗಳ ಮೂಲ

ನಾನು ನದೀಮುಖಜ ಭೂಮಿಗಳು ಅವಸಾನವಾಗುವುದರ ಹಿಂದಿನ ಕಾರಣದ ಕುರಿತು ಯೋಚಿಸುತ್ತಿರುವಾಗ, ನಿಮ್ಮ ಮನಸ್ಸಿನಲ್ಲಿ ಒಂದು ಊಹಾಪ್ರಮೇಯವು ಕುಣಿಯುತ್ತಿರಬಹುದು–ಅದೆಂದರೆ, ಸರಿಸುಮಾರು ಎಲ್ಲಾ ಪರಿಸರದ ಸಮಸ್ಯೆಗಳ ಹಿಂದಿರುವ ಇಂದಿನ ಅಪರಾಧಿಯಾದ, ಹವಾಮಾನ ವೈಪರೀತ್ಯ. 'ಹಾಗೇನಾದರೂ ಈ ಸಮಸ್ಯೆಗೆ ಇದೇ ನಿರ್ದಿಷ್ಟ ಕಾರಣ ಎಂದು ನಾವು ಗುರುತಿಸಲಾಗಿದ್ದರೆ ಆಗ ಪರಿಹಾರವೂ ಎಷ್ಟೊಂದು ಸುಲಭ ಸಾಧ್ಯವಾಗುತ್ತಿತ್ತು.' ಉದಾಹರಣೆಗೆ ಹವಾಮಾನ ವೈಪರೀತ್ಯದ ಮೇಲೆ ಮಣ್ಣಿನ ಸವಕಳಿಯ ಪರಿಣಾಮ ಎನ್ನುವುದರ ಕುರಿತು ಗೂಗಲ್ ನಲ್ಲಿ ನಾನು ಹುಡುಕಾಡುತ್ತಿದ್ದಾಗ ಮೊದಲ ಎರಡು ಪುಟಗಳ ಫಲಿತಾಂಶವು ನನ್ನ ಹುಡುಕಾಟದ ತದ್ವಿರುದ್ಧವಾದ ಉತ್ತರವನ್ನು ತೋರಿಸಿತು– ಅದೆಂದರೆ ಮಣ್ಣಿನ ಸವಕಳಿಯ ಮೇಲೆ ಹವಾಮಾನ ವೈಪರೀತ್ಯದ ಪರಿಣಾಮ ಎಂದು. ಜೀವವೈವಿಧ್ಯತೆಗೂ ಸಹ ಇದೇ ಅನ್ವಯಿಸುತ್ತದೆ. ಹವಾಮಾನ ವೈಪರೀತ್ಯವು ಎಲ್ಲ ರೀತಿಯ ಪರಿಸರದ ಸಮಸ್ಯೆಗಳನ್ನು ಬಿಗಡಾಯಿಸುತ್ತದೆ ಎನ್ನುವುದು ನಿಜವಾದರೂ ಒಂದು ಸಂಕೀರ್ಣ ಸಮಸ್ಯೆಗೆ ಏಕೈಕ ಕಾರಣವನ್ನು ಹೆಸರಿಸುವುದಕ್ಕೆ ಧಾವಿಸದೆ, ನಾವು ಕೊಂಚ ನಿಧಾನಿಸುವುದು ಒಳ್ಳೆಯದು. ಆ ಮಾದರಿಯು ನಮಗೆ ತಿಳಿದಿರುವಂಥದ್ದೆ. ಹವಾಮಾನ ವೈಪರೀತ್ಯದ ವಿರುದ್ಧದ ಹೋರಾಟವು ಅದರ ವೈರಿಯಾದ ಇಂಗಾಲಾಮ್ಲವನ್ನು ಗುರುತಿಸುವುದರೊಂದಿಗೆ ಪ್ರಾರಂಭವಾಗುತ್ತದೆ, ಅದೇನಾದರೂ ಭಯೋತ್ಪಾದನೆಯ ವಿರುದ್ಧದ ಸಮರಕ್ಕಿಂತಲೂ, ಮಾದಕದ್ರವ್ಯಗಳ ವಿರುದ್ಧದ

ಸಮರಕ್ಕಿಂತಲೂ ಅಥವಾ ದಾರಿದ್ರದ ವಿರುದ್ಧದ ಸಮರಕ್ಕಿಂತಲೂ ಉತ್ತಮವಾದ ಫಲಿತಾಂಶಗಳನ್ನು ತರುತ್ತದೆ ಎಂದು ನೀವು ನಂಬುತ್ತೀರಾ ?

ಪಳೆಯುಳಿಕೆಯ ಇಂಧನಗಳ ಬಳಕೆಯನ್ನು ನಿಲ್ಲಿಸುವುದು ಒಂದು 'ಸರಳೀಕೃತವಾದ ಮತ್ತು ಸುಳ್ಳಾದ ಪರಿಹಾರ' ಎಂದು ನಾನು ಖಂಡಿತವಾಗಿಯೂ ಹೇಳುತ್ತಿಲ್ಲ. ಆದರೆ ಪರಿಸರದ ನಾಶವನ್ನು ಇಲ್ಲಿ, ಅಲ್ಲಿ, ಎಲ್ಲೆಲ್ಲೂ ತಡೆಹಿಡಿಯಲು ಅವಶ್ಯಕವಾದಂತಹ ಒಂದು ಆಮೂಲಾಗ್ರ ಬದಲಾವಣೆಯನ್ನು ಅದು ಅಭಿವ್ಯಕ್ತಿಸುವುದಿಲ್ಲ. ಕೈಗಾರಿಕಾ ನಾಗರಿಕತೆಗೆ ಸಾಮರ್ಥ್ಯ ತುಂಬಲು ನಾವು ಪರ್ಯಾಯ ಇಂಧನ ಮೂಲಗಳನ್ನು ಹುಡುಕುವ ಮೂಲಕ ಇಂಗಾಲದ ಹೊರಸೂಸುವಿಕೆಯನ್ನು ನಿರ್ಮೂಲನೆ ಮಾಡಬಹುದು ಎಂದು ಊಹಿಸಿಕೊಳ್ಳಬಹುದು. ಆದರೆ ಗಾಢವಾದ ಸಂಶೋಧನೆಯ ಆಧಾರದ ಮೇಲೆ ಅದು ಅವಾಸ್ತವಿಕ ಎಂದು ಕಂಡು ಬರಬಹುದು, ಹೀಗಾಗಿ ನಮ್ಮ ಮೂಲಭೂತ ಜೀವನಕ್ರಮವು ಹೆಚ್ಚು ಕಡಿಮೆ ಬದಲಾಗದೆ ಮುಂದುವರೆಯುತ್ತದೆ ಎಂಬುದನ್ನು ಊಹಿಸಿಕೊಳ್ಳಬಹುದು. ಆದರೆ ಪರಿಸರ ವ್ಯವಸ್ಥೆಯ ವಿನಾಶದ ವಿಷಯದಲ್ಲಿ ಸಾಮಾನ್ಯವಾಗಿ ಹಾಗಾಗುವುದಿಲ್ಲ, ಅದು ಆಧುನಿಕ ಜೀವನಕ್ರಮದ ಪ್ರತಿಯೊಂದು ಅಂಶದ ಮೇಲೂ ಅಂದರೆ, ಗಣಿಗಾರಿಕೆ, ಕಲ್ಲುಗಣಿಗಾರಿಕೆ, ಕೃಷಿ ಪದ್ಧತಿ, ಔಷಧೋದ್ಯಮ, ಮಿಲಿಟರಿ ತಂತ್ರಜ್ಞಾನ, ಅಂತರರಾಷ್ಟ್ರೀಯ ಪ್ರಯಾಣ, ಗೃಹ ನಿರ್ಮಾಣ ಮುಂತಾದ ಎಲ್ಲವುಗಳ ಮೇಲೂ ಆರೋಪ ಹೊರಿಸುತ್ತದೆ.

ಅದೇ ಮಾನದಂಡದ ಮೇಲೆ, ಪರಿಸರ ಬದಲಾವಣೆಯ ಕುರಿತಾದ ಸಂದೇಹವಾದದ ವಿದ್ಯಮಾನವು, ಜಾಗತಿಕ ತಾಪಮಾನ ಏರಿಕೆಯ ಮಾನವಜನ್ಯ ಕಾರಣದ ಮೇಲೆ ಸಂಪೂರ್ಣವಾಗಿ ಹೊಣೆ ಹಾಕುವುದನ್ನು ನಂಬದಿರುವಂತಹ ಸಾಧ್ಯತೆಯನ್ನು ದೃಢೀಕರಿಸುತ್ತದೆ, ಏಕೆಂದರೆ ಆಗ ನಾವು ವಿಜ್ಞಾನಿಗಳ ತಜ್ಞ ಅಭಿಪ್ರಾಯದ ಆಧಾರದ ಮೇಲೆ ಹಲವಾರು ವಿದ್ಯಮಾನಗಳನ್ನು ಒಂದು ಏಕೈಕ ಸಿದ್ಧಾಂತವನ್ನಾಗಿ ಒಗ್ಗೂಡಿಸಬೇಕಾದ ಅವಶ್ಯಕತೆಯಿರುತ್ತದೆ. ನ್ಯಾರೋ ನದಿಯ ನದೀಮುಖಜ ಭೂಮಿಗೆ ಅಥವಾ ನೀವು ಬಾಲ್ಯಕಾಲದಲ್ಲಿ ಪದೇಪದೇ ಭೇಟಿ ನೀಡುತ್ತಿದ್ದ ನಿಮ್ಮ ಆಸಕ್ತಿಯ ತಾಣಕ್ಕೆ ಏನೋ ಆಗಿದೆ ಎಂದು ಅರ್ಥ ಮಾಡಿಕೊಳ್ಳುವುದಕ್ಕೆ ಅಂತಹ ಯಾವುದೇ ನಂಬಿಕೆಯು ಅವಶ್ಯಕವಲ್ಲ. ಅದನ್ನು ಅಲ್ಲಗಳೆಯಲು ಸಾಧ್ಯವಿಲ್ಲ ಹಾಗೂ ನಾವು ಅದ್ಯಾವುದನ್ನೋ 'ನಂಬಲಿ' ಅಥವಾ ಬಿಡಲಿ ಅದಕ್ಕೆ ನಮ್ಮನ್ನು ಆಳವಾಗಿ ತಟ್ಟುವ ಸಾಮರ್ಥ್ಯವಿದೆ.

ಹವಾಮಾನ ವೈಪರೀತ್ಯದ ಬದಲಿಗೆ ಸ್ಥಳೀಯ ಪರಿಸರದ ಸಮಸ್ಯೆಗಳ ಮೇಲೆ ಮತ್ತೆ ಗಮನಹರಿಸಬೇಕೆಂದು ನಾನು ವಕಾಲತ್ತು ವಹಿಸುತ್ತಿರುವೆನೇನೋ ಎಂಬಂತೆ ಕಾಣಬಹುದು. ಆದರೆ ಹಾಗೆ ಒಂದನ್ನು ಇನ್ನೊಂದರ ವಿರುದ್ಧ ಎತ್ತಿಹಿಡಿಯುವುದು ತಪ್ಪಾದ ಹಾಗೂ ಅಪಾಯಕಾರಿಯಾದ ಧೋರಣೆಯಾಗಿದೆ. ನಾನು ಹವಾಮಾನ ಬದಲಾವಣೆಯ ಕುರಿತು ಸಂಶೋಧನೆ ಮಾಡಿರುವುದರಿಂದ, ಹವಾಮಾನ ಬದಲಾವಣೆಗೆ ಅರಣ್ಯನಾಶ, ಕೈಗಾರಿಕಾ ಕೃಷಿ, ಜೌಗುನೆಲದ ವಿನಾಶ, ಜೀವವೈವಿಧ್ಯದ ನಾಶ, ಅತಿಯಾದ ಮೀನುಗಾರಿಕೆ ಹಾಗೂ ಭೂ ಪ್ರದೇಶ ಹಾಗೂ ಸಮುದ್ರಗಳ ದುರುಪಯೋಗ- ಇವುಗಳ ಪಾತ್ರ ಬಹುತೇಕ ವಿಜ್ಞಾನಿಗಳು ನಂಬಿರುವುದಕ್ಕಿಂತಲೂ ಅಗಾಧವಾದುದು ಎನ್ನುವುದು ನನಗೆ ಹೆಚ್ಚೆಚ್ಚು ಸ್ಪಷ್ಟವಾಗಿದೆ. ಅದೇ ರೀತಿಯಲ್ಲಿಯೇ, ಹವಾಮಾನವನ್ನು ಹತೋಟಿಯಲ್ಲಿಟ್ಟುಕೊಳ್ಳುವ ಹಾಗೂ ಇಂಗಾಲವನ್ನು ಹೀರಿಕೊಳ್ಳುವ ಸಾಮರ್ಥ್ಯವು, ಶಿಥಿಲಗೊಂಡಿರದ ಪರಿಸರ ವ್ಯವಸ್ಥೆಯಲ್ಲಿ ಎಷ್ಟಿದೆ ಎಂದು ಭಾವಿಸಲಾಗಿತ್ತೋ ಅದಕ್ಕಿಂತ ಹೆಚ್ಚಿಗೆ ಇದೆ. ಇದರ ಅರ್ಥವೆಂದರೆ ನಾವು ಇಂಗಾಲದ ಹೊರಸೂಸುವಿಕೆಯನ್ನು ಶೂನ್ಯಕ್ಕೆ ಇಳಿಸಿದರೂ ಸಹ, ಈಗ ಜರುಗುತ್ತಿರುವ ಪರಿಸರದ ನಾಶವನ್ನು ಸ್ಥಳೀಯ ಮಟ್ಟದಲ್ಲಿ ಎಲ್ಲ ಕಡೆಗಳಲ್ಲಿಯೂ ಹಿಮ್ಮುಖಗೊಳಿಸದಿದ್ದರೆ, ಆಗಲೂ ಸಹ ಹವಾಮಾನವು ಮಿಲಿಯಾಂತರ ಬಾರಿ ಸಾಯುತ್ತಲೇ ಇರುತ್ತದೆ.

ಈ ಹಿಂದೆ ನಾನು ಪ್ರಸ್ತಾಪಿಸಿರುವಂತೆ ಗೂಗಲ್ ಹುಡುಕಾಟದ ಫಲಿತಾಂಶಗಳು ಏನನ್ನು ಸೂಚಿಸುತ್ತದೆಯೋ ಆ ಪೂರ್ವಕಲ್ಪನೆಗಿಂತ ಭಿನ್ನವಾಗಿ, ಜಾಗತಿಕ ಪರಿಸರದ ಸ್ವಾಸ್ಥ್ಯವೂ ಸ್ಥಳೀಯ ಪರಿಸರದ ಸ್ವಾಸ್ಥ್ಯದ ಮೇಲೆ ಅವಲಂಬಿತವಾಗಿದೆ. ಪರಿಸರದ ಬಿಕ್ಕಟ್ಟಿಗೆ, ಜಾಗತಿಕವಾಗಿ ನಾವು ಮಿಲಿಯಾಂತರ ಸ್ಥಳೀಯ ಪರಿಸರ ವ್ಯವಸ್ಥೆಗಳನ್ನು ಪುನರ್ ಸ್ಥಾಪಿಸಬೇಕು ಹಾಗೂ ಕಾಪಾಡಬೇಕು ಎನ್ನುವುದನ್ನು ಬಿಟ್ಟರೆ ಇದಕ್ಕೆ ಯಾವುದೇ ಜಾಗತಿಕ ಪರಿಹಾರ ಇಲ್ಲದೆ ಇರಬಹುದು. ಜಾಗತಿಕವಾಗಿ ಅನ್ವಯವಾಗುವಂತಹ ಪರಿಹಾರಗಳ ಮೇಲೆ ಗಮನವನ್ನು ಹರಿಸುವುದರಿಂದ ಸ್ಥಳೀಯ ಪರಿಸರದ ವಿಷಯಗಳ ಪ್ರಾಮುಖ್ಯತೆಯನ್ನು ಗೌಣಗೊಳಿಸುವತ್ತ ನಾವು ವಾಲುತ್ತೇವೆ. 'ಕಡಿಮೆ ಇಂಗಾಲ' ದೊಂದಿಗೆ 'ಹಸಿರು' ಚಳವಳಿಯನ್ನು ಹೆಚ್ಚು ಹೆಚ್ಚಾಗಿ ಗುರುತಿಸುವುದರಲ್ಲಿ ಇದನ್ನು ನಾವು ಈಗಾಗಲೇ ಕಾಣುತ್ತಿದ್ದೇವೆ. ಆದ್ದರಿಂದ ಜಾಗತಿಕ ಸಂಸ್ಥೆಗಳಿಗೆ ಇನ್ನೂ ಹೆಚ್ಚಿನ ಶಕ್ತಿಯನ್ನು ಕೊಡುವುದರತ್ತ ಪ್ರಚೋದಿಸುವಂತಹ, ಜಾಗತಿಕ ಪರಿಹಾರಗಳನ್ನು ಜಾರಿಗೊಳಿಸುವತ್ತ ಧಾವಿಸುವುದರ ಬಗ್ಗೆ ನಾವು ಜಾಗರೂಕರಾಗಿದ್ದರೆ ಒಳ್ಳೆಯದು. ನಿಜಕ್ಕೂ, ಜಾಗತಿಕ ಇಂಗಾಲದ ನೀತಿಗಳು ಈಗಾಗಲೇ ಜಲವಿದ್ಯುತ್ ಹಾಗೂ ಜೈವಿಕ ಇಂಧನದ ಯೋಜನೆಗಳಿಂದಾಗಿ ಸಾಕಷ್ಟು ಪರಿಸರದ ನಾಶಕ್ಕೆ ಕಾರಣವಾಗಿವೆ.

ಹಾಗಾದರೆ ಇಂಗಾಲದ ಹೊರಸೂಸುವಿಕೆಯನ್ನು ಕಡಿತಗೊಳಿಸುವುದನ್ನು ನಿಲ್ಲಿಸಬೇಕೆಂದು ನಾನು ವಕಾಲತ್ತು ವಹಿಸುತ್ತಿರುವೆನೇ ? ಇಲ್ಲ. ಆದರೆ ನಾವು ಜಾಗತಿಕ ಅಂಶದ ಮೇಲೆ ಹೆಚ್ಚು ಒತ್ತು ನೀಡಿದರೆ, ಆಗ ಅದು ನಮ್ಮ ಸಮಸ್ಯಾ-ಪರಿಹಾರಕ್ಕೆ ಒಬ್ಬ-ವೈರಿಯನ್ನು-ಹುಡುಕುವ ನಮ್ಮ ಸಾಂಪ್ರದಾಯಿಕ ಧೋರಣೆಯೊಂದಿಗೆ ಎಷ್ಟು ಸುಲಭವಾಗಿ ಹೊಂದಿಕೊಳ್ಳುತ್ತದೆ ಎಂದರೆ, ಆಗ ನಾವು ಇದರ ಆಳದಲ್ಲಿರುವ ಕಾರಣಗಳನ್ನು ಕಡೆಗಣಿಸುವ ಅಪಾಯಕ್ಕೆ ಹಾಗೂ ಸಮಸ್ಯೆಯು ಮತ್ತಷ್ಟು ಬಿಗಡಾಯಿಸುವಂತಹ ಅಪಾಯಕ್ಕೆ ಸಿಲುಕಿಕೊಳ್ಳುತ್ತೇವೆ. ಆಗ ಇದು, ನಮ್ಮ '(ಇಂತಿಂಥವುಗಳ) ವಿರುದ್ಧದ ಸಮರಗಳು' ಎಂಬ ಚಳವಳಿಗಳಂತಾಗುತ್ತವೆ.

ಪ್ರತಿಯೊಬ್ಬರೂ ಸಹ ಇತರರ ಸ್ಥಳೀಯ ಪ್ರದೇಶಗಳನ್ನು ಗೌರವಿಸುತ್ತಲೇ, ತಮ್ಮ ಸ್ಥಳೀಯ ಪ್ರದೇಶಗಳನ್ನು ರಕ್ಷಿಸಿಕೊಳ್ಳುವ ಹಾಗೂ ಪುನರ್ ಸ್ಥಾಪಿಸಿಕೊಳ್ಳುವ ನಿಟ್ಟಿನಲ್ಲಿ ತಮ್ಮ ಪ್ರೀತಿ, ಕಾಳಜಿ ಹಾಗೂ ಬದ್ಧತೆಯನ್ನು ಅರ್ಪಿಸಿದರೆ, ಆಗ ಹವಾಮಾನದ ಬಿಕ್ಕಟ್ಟಿನ ಪರಿಹಾರವು ಅದರ ಅಡ್ಡಪರಿಣಾಮವಾಗಬಹುದು. ನಾವು ಪ್ರತಿಯೊಂದು ನದೀಮುಖಜ ಭೂಮಿಯನ್ನು, ಪ್ರತಿಯೊಂದು ಅರಣ್ಯವನ್ನು, ಪ್ರತಿಯೊಂದು ಜೌಗು ನೆಲವನ್ನು, ಪ್ರತಿಯೊಂದು ಹಾನಿಗೊಳಗಾಗಿರುವ ಹಾಗೂ ಮರುಭೂಮಿಯಂತಾಗಿರುವ ತುಂಡು ಭೂಮಿಯನ್ನು, ಪ್ರತಿಯೊಂದು ಹವಳದ ಬಂಡೆಯನ್ನು, ಪ್ರತಿಯೊಂದು ಕೆರೆಯನ್ನು ಹಾಗೂ ಪ್ರತಿಯೊಂದು ಬೆಟ್ಟವನ್ನು ಪುನರ್ ಸ್ಥಾಪಿಸಲು ಪ್ರಯತ್ನಿಸಿದರೆ ಆಗ ಬಹಳಷ್ಟು ಕೊರೆಯುವುದನ್ನು, ಭೂಗತ ಬಂಡೆಗಳನ್ನು ಅಧಿಕ ಒತ್ತಡದ ದ್ರವಗಳಿಂದ ಒಡೆಯುವುದನ್ನು ಹಾಗೂ ಕೊಳವೆ ಮಾರ್ಗಗಳನ್ನು ಕೊರೆಯುವುದನ್ನು ನಿಲ್ಲಿಸಬೇಕಾಗುತ್ತದೆ. ಆದರೆ ಅದರಿಂದಾಗಿ ಜೀವ ಮಂಡಲವು ಸಹ ಬಹಳಷ್ಟು ಚೇತರಿಸಿಕೊಳ್ಳುತ್ತದೆ.

ಆದರೆ ಅಂತಹ ಪ್ರೀತಿ, ಕಾಳಜಿ, ಧೈರ್ಯ ಹಾಗೂ ಬದ್ಧತೆಗಳು ಎಲ್ಲಿಂದ ಬರುತ್ತವೆ ? ಹಾನಿಗೊಳಗಾಗುತ್ತಿರುವುದರೊಂದಿಗೆ ಒಂದು ವೈಯಕ್ತಿಕ ಸಂಬಂಧವನ್ನು ಬೆಳೆಸಿಕೊಳ್ಳುವುದರಿಂದ ಮಾತ್ರ ಅದು ಬರುವುದಕ್ಕೆ ಸಾಧ್ಯ. ಆದ್ದರಿಂದಲೇ ನಾವು ಸ್ಟೆಲ್ಲಾ ಹೇಳಿದಂತಹ ಕಥೆಗಳನ್ನು ಇತರರಿಗೆ ಹೇಳಬೇಕು. ನಮ್ಮ ನಾಡಿನ ಸೌಂದರ್ಯದ ಕುರಿತು,

ನಮ್ಮ ನಾಡಿನ ಕುರಿತು ನಮಗೆ ಇರುವ ದುಃಖ ಹಾಗೂ ಪ್ರೀತಿಯ ಅನುಭವಗಳನ್ನು ನಾವು ಇತರರೊಂದಿಗೆ ಹಂಚಿಕೊಂಡರೆ ಆಗ ಅವುಗಳಿಂದ ಬೇರೆಯವರನ್ನು ಸಹ ಪ್ರಭಾವಿಸಬಹುದು. ಸ್ವೆಲ್ಲಾರವರ ಮಾತುಗಳನ್ನು ಕೇಳಿ, ನಿಮ್ಮ ಬಾಲ್ಯಾವಸ್ಥೆಯು ಕಡಲ ತೀರದಲ್ಲಲ್ಲದೆ ಬೆಟ್ಟಗಾಡುಗಳಲ್ಲಿ ಕಳೆದಿದ್ದರೂ ಸಹ, ಖಂಡಿತವಾಗಿಯೂ ನಿಮ್ಮಲ್ಲಿ ಏನನ್ನೋ ಕಲಕಿದಂತಾಗಿರುತ್ತದೆ. ಭೂಮಿ, ಬೆಟ್ಟ, ನೀರು ಹಾಗೂ ಕಡಲಿನ ಕುರಿತು ನಮ್ಮ ಪ್ರೀತಿಯನ್ನು ನಾವು ಇತರರಿಗೆ ವರ್ಗಾಯಿಸಿದಾಗ ಹಾಗೂ ಯಾವುದು ಕಳೆದುಹೋಗಿದೆಯೋ ಅದರ ಬಗ್ಗೆ ದುಃಖವನ್ನು ಕಲಕಿದಾಗ; ನಮ್ಮನ್ನು ಹಾಗೂ ಇತರರನ್ನು ಹೀಗಾಗಿರುವುದಕ್ಕೆ ಭಾಗಿದಾರರನ್ನಾಗಿಸಿಕೊಳ್ಳುತ್ತಲೇ ತಕ್ಷಣವೇ ಪರಿಹಾರ ಹಾಗೂ ಆರೋಪದ ಆಲೋಚನೆಗಳಿಗೆ ಧುಮುಕದೆ ಆ ನೋವನ್ನು ಹಸಿಯಾಗಿ ಉಳಿಸಿಕೊಂಡಾಗ, ಬದ್ಧತೆಯು ಜೀವಂತವಾಗಿರುವಂತಹ ಸ್ಥಳಕ್ಕೆ ನಾವು ಆಳವಾಗಿ ತಲುಪುತ್ತೇವೆ. ನಮ್ಮ ಪರಾನುಭೂತಿಯಲ್ಲಿ ನಾವು ಬೆಳೆಯುತ್ತೇವೆ. ನಮ್ಮ ಪ್ರಜ್ಞೆಯನ್ನು ಮರಳಿ ಪಡೆದುಕೊಳ್ಳುತ್ತೇವೆ.

ಹವಾಮಾನ ವೈಪರೀತ್ಯಕ್ಕೆ ಇದು 'ನಿರ್ದಿಷ್ಟ ಪರಿಹಾರವೇ?' ನಾನು ಇದನ್ನು ಒಂದು ಪರಿಹಾರವಾಗಿ ಸೂಚಿಸುತ್ತಿಲ್ಲ. ಇದರಿಂದ ಪರಿಹಾರ ಸಿಗುವುದಿಲ್ಲ. ನಿಜ, ಆದರೆ ಹೀಗೆ ಮಾಡದಿದ್ದರೆ ಎಷ್ಟೇ ಜಾಣತನದ ನೀತಿಯನ್ನು ರೂಪಿಸಿದರೂ ಸಹ, ಅದು ಪ್ರಯೋಜನಕ್ಕೆ ಬರುವುದಿಲ್ಲ.

## ಪ್ರಮುಖ ಕಲಿಕೆಗಳು



- ಪರಿಸರ ವ್ಯವಸ್ಥೆಯ ವಿನಾಶವು ಆಧುನಿಕ ಜೀವನಕ್ರಮದ ಪ್ರತಿಯೊಂದು ಅಂಶವನ್ನು ಆರೋಪಿಯನ್ನಾಗಿಸುತ್ತದೆ.
- ಬಹುತೇಕ ಎಲ್ಲಾ ಸ್ಥಳೀಯ ಹಾಗೂ ಜಾಗತಿಕ ಪರಿಸರ ವ್ಯವಸ್ಥೆಗಳು ಸಂಕೀರ್ಣವಾದ ಸರಳರೇಖಾತ್ಮಕವಲ್ಲದ ವ್ಯವಸ್ಥೆಗಳಾಗಿರುವುದರಿಂದ, ಅವುಗಳ ವಿನಾಶಕ್ಕೆ ಹಾಗೂ ಜಾಗತಿಕ ಪರಿಸರದ ಬಿಕ್ಕಟ್ಟುಗಳಿಗೆ ಏಕೈಕ ಕಾರಣಗಳನ್ನು ಗುರುತಿಸುವುದು ಬಹಳಷ್ಟು ಸಲ ಅಸಾಧ್ಯವಾಗುತ್ತದೆ.
- ಸರಳರೇಖಾತ್ಮಕವಲ್ಲದ ಸಂಕೀರ್ಣ ವ್ಯವಸ್ಥೆಗಳು ನಮ್ಮ ಸಂಸ್ಕೃತಿಯಲ್ಲಿನ ಸಮಸ್ಯಾ-ಪರಿಹಾರಕ್ಕೆ ಸಾಮಾನ್ಯ ಧೋರಣೆಯಾದ, ಅಂದರೆ ಈ ಸಮಸ್ಯೆಗೆ ಇದೇ 'ನಿರ್ದಿಷ್ಟ ಕಾರಣ' ಅಥವಾ ಅಪರಾಧಿ ಎಂದು ಗುರುತಿಸಿ, ಆ ಆರೋಪಿಯ ಮೇಲೆ ಪ್ರಾಬಲ್ಯ ಸ್ಥಾಪಿಸಿ, ಸೋಲಿಸಿ ಅಥವಾ ಸರ್ವನಾಶ ಮಾಡುವ ಧೋರಣೆಯೊಂದಿಗೆ ಘರ್ಷಿಸುತ್ತವೆ.
- ಈ ಮೂಲಭೂತವಾದ ಸಮಸ್ಯಾ-ಪರಿಹಾರದ ಕಾರ್ಯತಂತ್ರವೂ ಪ್ರತ್ಯೇಕತೆಯ ಆಳವಾದ ಸಂಕಥನದ ಮೇಲೆ ನಿಂತಿರುತ್ತದೆ. ಪ್ರಕೃತಿಯ ನಮ್ಮಿಂದ ಹೊರಗಿರುವಂತಹ ಒಂದು ವಿದ್ಯಮಾನವಾಗಿದ್ದು ಅದು ನಮ್ಮ ನಿಯಂತ್ರಣಕ್ಕೆ ಒಳಪಡುವಂತದ್ದು ಹಾಗೂ ಮಾನವನ ಪ್ರಗತಿ ಎಂದರೆ ಅದು ಈ ನಿಯಂತ್ರಣದ ಅಂತ್ಯವಿಲ್ಲದ ವಿಸ್ತರಣೆಯಾಗಿದೆ ಎನ್ನುವ ಆಲೋಚನೆಯ ಒಂದು ಎಳೆ ಇದರಲ್ಲಿ ಕಂಡುಬರುತ್ತದೆ.
- ಸಮಸ್ಯಾ-ಪರಿಹಾರದ ಈ ಧೋರಣೆಯ ಒಂದು ಉದಾಹರಣೆಯನ್ನು, ಪರಿಸರದ ಬಿಕ್ಕಟ್ಟಿಗೆ ಒಂದು ಪ್ರತ್ಯೇಕವಾದ ಹಾಗೂ ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಾಣುವಂತಹ ಜಾಗತಿಕ ಅಂಶದ (ಹವಾಮಾನ ಬದಲಾವಣೆಯಂತಹ) ಪಾತ್ರಕ್ಕೆ ಅತಿಯಾದ ಒತ್ತು ಕೊಡುತ್ತಾ, ಪರಿಸರದ ಬಿಕ್ಕಟ್ಟಿನ ಆಳವಾದ ಮೂಲಕಾರಣಗಳನ್ನು (ವಿಶೇಷವಾಗಿ ಸ್ಥಳೀಯವಾದವುಗಳನ್ನು) ಕಡೆಗಣಿಸುವ ಅಪಾಯ ಹೊಂದಿರುವ ಪ್ರವೃತ್ತಿಯಲ್ಲಿ ಕಾಣಬಹುದು.
- ಪರಿಸರದ ಬಿಕ್ಕಟ್ಟು ಹಾಗೂ ಹವಾಮಾನದ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು, ನಾವು ಪ್ರತಿಯೊಬ್ಬರೂ ನಮ್ಮ ಪ್ರೀತಿ, ಕಾಳಜಿ ಹಾಗೂ ಬದ್ಧತೆಯನ್ನು ಇತರರ ಸ್ಥಳೀಯ ಪ್ರದೇಶಗಳ ಬಗ್ಗೆ ಗೌರವ ತೋರಿಸುತ್ತಲೇ ನಮ್ಮ ಸ್ಥಳೀಯ ಪ್ರದೇಶಗಳನ್ನು ಕಾಪಾಡಿಕೊಳ್ಳುವ ಹಾಗೂ ಪುನರ್ ಸ್ಥಾಪಿಸಿಕೊಳ್ಳುವ ನಿಟ್ಟಿನಲ್ಲಿ ಒತ್ತು ಕೊಡಬೇಕಾಗುತ್ತದೆ.
- ಸ್ಥಳೀಯ ಪ್ರದೇಶಗಳನ್ನು ಕಾಪಾಡಿಕೊಳ್ಳುವ ಹಾಗೂ ಪುನರ್ ಸ್ಥಾಪಿಸುವ ಬದ್ಧತೆಯು ಅವುಗಳು ಅನುಭವಿಸುತ್ತಿರುವ ಪರಿಸರದ ನಾಶದ ಜೊತೆಗೆ ಒಂದು ವೈಯಕ್ತಿಕ ಸಂಬಂಧವನ್ನು ಬೆಳೆಸಿಕೊಳ್ಳುವುದರೊಂದಿಗೆ ಬರುತ್ತದೆ. ಈ ವೈಯಕ್ತಿಕ ಸಂಬಂಧವು ನಮ್ಮ ಪರಾನುಭೂತಿಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ, ಹಾಗೂ ಈ ಪರಾನುಭೂತಿಯೇ ನಮ್ಮ ಬದ್ಧತೆಗೆ ಮೂಲಸೆಲೆಯಾಗಿದೆ.

**ಟಿಪ್ಪಣಿಗಳು:**

1. ಈ ಲೇಖನವು ಮೊದಲು 2016ರ ಜುಲೈನಲ್ಲಿ https://charlesisenstein.org/about/ ಜಾಲತಾಣದಲ್ಲಿ ಪ್ರಕಟವಾಗಿತ್ತು. ಈ ಲೇಖನವನ್ನು Creative Commons Attribution 4.0 International Licenceನಲ್ಲಿ ಪ್ರಕಟಿಸಲಾಗಿದೆ. ಈ ಆವೃತ್ತಿಯನ್ನು ಭಾರತದ ಸಂದರ್ಭಕ್ಕೆ ಪ್ರಸ್ತುತವಾಗಿಸಲು ಅಲ್ಪ ಸ್ವಲ್ಪ ಪರಿಷ್ಕರಿಲಾಗಿದೆ. ಇದನ್ನು ಐ ವಂಡರ್‌ನಲ್ಲಿ... ಲೇಖಕರ ಅನುಮತಿಯೊಂದಿಗೆ ಪ್ರಕಟಿಸಲಾಗಿದೆ.
2. ಲೇಖನದ ಶೀರ್ಷಿಕೆಯ ಹಿನ್ನೆಲೆಯಲ್ಲಿ ಬಳಸಲಾಗಿರುವ ಚಿತ್ರದ ಮೂಲ: Estuary, Karnataka. URL: https://pxhere.com/en/photo/754282. ಪರವಾನಗಿ: CCo Public Domain.

**ಚಾರ್ಲ್ಸ್ ಐಸೆನ್‌ಸ್ಟೈನ್** ಅವರು ಅಮೆರಿಕದ ಒಬ್ಬ ಸಾರ್ವಜನಿಕ ಭಾಷಣಕಾರರು ಹಾಗೂ ಲೇಖಕರು. ಅವರ ಕಾರ್ಯಕ್ಷೇತ್ರವು ಮಾನವ ನಾಗರಿಕತೆಯ ಇತಿಹಾಸ, ಅರ್ಥಶಾಸ್ತ್ರ, ಆಧ್ಯಾತ್ಮಿಕತೆ ಹಾಗೂ ಪರಿಸರದ ಚಳುವಳಿಯನ್ನು ಒಳಗೊಂಡಂತೆ ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿದೆ. ಅವರು ಅನ್ವೇಷಿಸುತ್ತಿರುವ ಮುಖ್ಯ ವಿಷಯಗಳು ಪ್ರತಿ-ಸರಕೀಕರಣ (anti-consumerism), ಅಂತರ್ ಅವಲಂಬನೆ ಹಾಗೂ ಹೇಗೆ ಮಿಥ್ಯೆ ಹಾಗೂ ಸಂಕಥನಗಳು ಸಂಸ್ಕೃತಿಯನ್ನು ಪ್ರಭಾವಿಸುತ್ತವೆ ಮುಂತಾದವುಗಳನ್ನು ಒಳಗೊಳ್ಳುತ್ತದೆ. ಚಾರ್ಲ್ಸ್‌ರವರನ್ನು ಸಂಪರ್ಕಿಸಲು ಈ ಲಿಂಕ್ ಬಳಸಿ: https://charlesisenstein.org/contact/.

ಅನುವಾದ: **ಎಚ್. ಜಿ. ಜಯಲಕ್ಷ್ಮಿ** | ಪರಿಶೀಲನೆ: **ಸ್ಮಿತಾ ಭಟ್**